(a)	(b)	(c)
14 Stipendiary Training Programme for Engineers ...	4.76 ,,	347 ,,
15 Training of Kannada Typists and Stenographers ...	0.88 ,,	65 ,,
16 Employment Assistance to Medical Graduates ...		100 ,,
17 Employment Assistance to Dental Graduates ...	1.03 ,,	17 ,,
18 Employment Assistance to Ayurvedic Graduates ...		8 ,,

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಸಭೆಯ ಮುಂದೆ ಇಟ್ಟಿರುವ ತಃಖ್ತೆಯ ಪ್ರಕಾರ ಕೆಲವು ಹೊಸ ಯೋಜನೆಗಳನ್ನು ಇಟ್ಟುಕೊಂಡಿದ್ದೇವೆ ಎಂಬುದಾಗಿ ಹೇಳಿದ್ದೀರಿ. ಆ ಯೋಜನೆಗಳು ಯಾವುವು ?

† ಶ್ರೀ ಆಜೀಜ್‌ಸೇಟ್.— ಆ ಹೊಸ ಯೋಜನೆಗಳು ಯಾವ್ಯಾವ ಎಂಬುದನ್ನು ಸಭೆಯ ಮುಂದೆ ಕೊಟ್ಟಿರುವ ತಃಖ್ತೆಯಲ್ಲಿ ವಿವರಿಸಲಾಗಿದೆ. ಅವು ಸುಮಾರು ೩೨ ಯೋಜನೆಗಳಿವೆ.

ಶ್ರೀ ಎಸ್. ಕರಿಯಪ್ಪ.—ಯಾವ್ಯಾವ ರೀತಿಯಲ್ಲಿ ಆ ಯೋಜನೆಗಳ ಬಗ್ಗೆ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆಂಬುದಾಗಿ ಪರಿಶಿಷ್ಟದಲ್ಲಿ ಹೇಳಿದ್ದೀರಿ. ಇದರೊಳಗೆ ಸಾಯಿಲ್ ಕನಸರ್‌ವೇಷನ್ ಸಹ ಸೇರಿಸಿದ್ದೀರೋ? ಮತ್ತು ಅದಕ್ಕೆ ಸಹಾಯ ಮಾಡುವುದಕ್ಕೆ ನಾರ್ಮಲ್‌ವೇನಲ್ಲಿ ಇರತಕ್ಕ ಅಪಕಾಶವಷ್ಟೇನೋ ?

ಶ್ರೀ ಆಜೀಜ್‌ಸೇಟ್.— ಈ ಯೋಜನೆಗಳಿಗಾಗಿ ೧೪ ಲಕ್ಷ ರೂಪಾಯಿಗಳಂ ಹೋದ ವರ್ಷ ಕೇಂದ್ರ ಸರ್ಕಾರದಿಂದ ಏಡ್ ರೂಪವಾಗಿ ಬಂತು. ಆದ್ದರಿಂದ ವೇರಿಯಸ್ ಸ್ಕೀಮ್ಸ್ ತೆಗೆದುಕೊಂಡು ಸುಮಾರು ೪೦೫೦ ಜನ ಕೆಲಸವಿಲ್ಲದೇ ಇರುವವರಿಗೆ ಉದ್ಯೋಗಗಳನ್ನು ದೊರಕಿಸಿದ್ದೇವೆ ಈಗ ಸ್ಪೆಷಲ್ ಎಂಪ್ಲಾಯ್‌ಮೆಂಟ್ ಪ್ಲಾನ್ ಎಂಬುದಾಗಿ ಮಾಡಿ ಇನ್ನೂ ಅರ್ಧ ಮಿಲಿಯನ್ ಜನರಿಗೆ ಉದ್ಯೋಗಗಳನ್ನು ಒದಗಿಸಿಕೊಡಬೇಕೆಂದು ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಇಡೀ ದೇಶದಲ್ಲಿ ಈ ಒಂದು ರಾಜ್ಯಕ್ಕೆ ೫೫ ಕೋಟಿ ರೂಪಾಯಿಗಳ ಯೋಜನೆ ಈಗಾಗಲೇ ಮಂಜೂರಾಗಿ ಬಂದಿದೆ. ಆದಕ್ಕಾಗಿ ಈಗಾಗಲೇ ಒಂದು ಕೋಆರ್ಡಿನೇಷನ್ ಕಮಿಟಿ ಎಂಬುದಾಗಿ ಮಾಡಿದ್ದೇವೆ. ಸ್ಪೆಷಲ್ ಸೆಕ್ರೆಟರಿಯನ್ನು ಇಟ್ಟುಕೊಂಡಿದ್ದೇವೆ. ಒಬ್ಬ ಸ್ಪೆಷಲ್ ಡೈರೆಕ್ಟರನ್ನು ನೇಮಕಮಾಡಿದ್ದೇವೆ. ಆದ್ದರಿಂದ ಈ ಕಾರ್ಯ ಕ್ರಮಗಳಿಂದ ಸ್ವಲ್ಪ ಮಟ್ಟಿಗೆ ಅನುಕೂಲವಾಗಬಹುದೆಂದು ನನಗೆ ಕಾಣುತ್ತದೆ.

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರ ಬಂದಿಲ್ಲ. ಪರಿಶಿಷ್ಟದಲ್ಲಿ ಕೊಟ್ಟಿರುವ ಪಟ್ಟಿಯನ್ನು ನೋಡಿದರೆ ಈಗಾಗಲೇ ನಡೆಯುತ್ತಾ ಇರತಕ್ಕ ಕೆಲಸಗಳನ್ನು ನಮೂದುಮಾಡಿ ಈ ಪಟ್ಟಿಯನ್ನು ದೊಡ್ಡದಾಗಿ ಮಾಡುವುದಕ್ಕೆ ಇಷ್ಟೊಂದು ಕೆಲಸಗಳನ್ನು ಸೇರಿಸಿದ್ದಾರೆಂದು ನನಗೆ ಗೊತ್ತಾಗುತ್ತದೆ. ಈ ಹಳೆಯ ಕೆಲಸಗಳಲ್ಲದೆ ಹೊಸದಾಗಿ ಏನೇನು ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಆಜೀಜ್‌ಸೇಟ್.—ಪಟ್ಟಿಯನ್ನು ದೊಡ್ಡವಾಗಿ ಮಾಡುವುದಕ್ಕೇನೂ ಹೇಗಿಲ್ಲ. ಆ ಒಂದರಿ ಕಾರಣದಿಂದ ದೊಡ್ಡ ಪಟ್ಟಿಯನ್ನೇನೂ ಕೊಟ್ಟಿಲ್ಲ. ಅದು ಮಾನ್ಯ ಸದಸ್ಯರ ಅಭಿಪ್ರಾಯವಷ್ಟೇ. ಹೋದಸಾರಿ ೧೪ ಲಕ್ಷ ರೂಪಾಯಿಗಳ ಸ್ಕೀಮನ್ನು ಮಾಡಿದ್ದೆವು. ಈ ವರ್ಷವೂ ೧೪ ಲಕ್ಷ ರೂಪಾಯಿಗಳಷ್ಟು ಕೇಂದ್ರ ಸರ್ಕಾರದಿಂದ ಏಡ್ ರೂಪವಾಗಿ ಬಂದಿದೆ. ಈ ವರ್ಷವೂ ಅದೇ ರೀತಿಯಾಗಿ ಕೆಲವು ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದನ್ನು ಪರ್ಯಾಲೋಚನೆ ಮಾಡುತ್ತಿದ್ದೇವೆ.

† Asterisks indicate that remarks or speeches have not been evised by the member concerned.

EMPLOYMENT TO EDUCATED UNEMPLOYED OF RURAL AREAS

51 (73) SRI B. G. BANAKAR (Hirekerur) —

Will the Minister for Labour be pleased to state:—

(*a*) whether the Government is aware that there are large number of unemployed graduates and under-graduates, including SSLC passed in all the taluks of the State;

(*b*) whether the Government is also aware that few candidates from rural areas and a large number of candidates from urban areas are selected by the various District Level and State Level Recruitment Committees and Public Service Commission as a result of which the number of educated unemployed persons in rural areas is increasing and they are put to lot difficulties, embarassment and harassment;

(*c*) the measures and steps that the Government would take to provide more employment in various departments to the educated unemployed in rural areas?

SRI AZEEZS SAIT (Minister for Labour).—

(*a*) Yes.
(*b*) No.
(*c*) Does not arise.

ಶ್ರೀ ಬಿ.ಜಿ. ಬಣಕಾರ್.—ಪ್ರಶ್ನೆಗೆ ಸಂಬಂಧಪಟ್ಟಹಾಗೆ ಪರಿಶಿಷ್ಟದಲ್ಲಿ ಈ ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಯಾವ ರೀತಿಯಲ್ಲಿ ಹೆಚ್ಚಿದೆ ಎಂಬುದನ್ನು ಕೊಟ್ಟಿದ್ದೀರಿ. ಈವತ್ತಿನ ಮಟ್ಟಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ತುತ್ತು ಅರ್ಬನ್ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಎಷ್ಟಿದೆಯೆಂಬುದನ್ನು ಹೇಳುವುದಕ್ಕಾಗುತ್ತದೆಯೆ ?

† ಶ್ರೀ ಅಜೀಜ್‌ಸೇಟ್.—ರೂರಲ್ ಮತ್ತು ಅರ್ಬನ್ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಎಷ್ಟಿದೆಯೆಂಬುದನ್ನು ಕ್ಯಾಟಿಗಾರಿಕಲ್ ಆಗಿ ತಯಾರುಮಾಡುವುದಕ್ಕೆ ಬರುವುದಿಲ್ಲ. ರೂರಲ್ ಮತ್ತು ಅರ್ಬನ್ ಏರಿಯಾಗಳಲ್ಲಿ ಇರತಕ್ಕ ನಿರುದ್ಯೋಗಿಗಳು ಎಲ್ಲರೂ ತಂತಮ್ಮ ಹೆಸರುಗಳನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆ. ಈ ಅಂಕಿಅಂಶಗಳನ್ನು ಈಗ ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಉದ್ಯೋಗಗಳು ಎಲ್ಲೆಲ್ಲಿವೆ ಎಂಬ ಬಗ್ಗೆ ಅವರು ಆಪಾವರ್ಟ್‌ಜಿಮಾಡಿ ಅರ್ಜಿಗಳನ್ನು ಕರೆದಿದ್ದಾರೆ. ಆದನ್ನು ಗ್ರಾಮಾಂತರ ಮತ್ತು ಅರ್ಬನ್ ಪ್ರದೇಶಗಳಲ್ಲಿ ಎಷ್ಟೆಷ್ಟು ನಿರುದ್ಯೋಗಿಗಳು ಇದ್ದಾರೆಂದು ವಿಂಗಡಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಜಿ. ಬಣಕಾರ್.—ಮೊನ್ನೆ ಮಂತ್ರಿಮಂಡಲದಲ್ಲಿ ಒಂದು ತೀರ್ಮಾನವಾಗಿದೆ. ನಿವೃತ್ತಿ ವಯಸ್ಸನ್ನು ೫೫ಕ್ಕಿಂತ ಹೆಚ್ಚಿಗೆ ಹೆಚ್ಚಿಸಕೂಡದೆಂದು ತೀರ್ಮಾನ ಮಾಡಿರುವುದರಿಂದ ಅನೇಕ ರೀತಿಯಲ್ಲಿ ನಿರುದ್ಯೋಗಿಗಳಿಗೆ ಅನುಕೂಲವುಂಟಾಗುತ್ತದೆ. ಆದರೆ ಈಗಿನ ಕಾಯಿದೆಗಳ ಪ್ರಕಾರ ಅನೇಕ ಕಡೆಗಳಲ್ಲಿ ಬೇರೆಬೇರೆ ವಯೋಮಿತಿಯಾನ್ನು ನಿವೃತ್ತರಾಗುವುದಕ್ಕೆ ಇಟ್ಟಿರುವುದರಿಂದ ಆ ಬಗ್ಗೆ ಒಂದು ನಿರ್ದಿಷ್ಟವಾದ ನಿಯಮಾವಳಿಯನ್ನು ಮಾಡುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರ ?

ಶ್ರೀ ಅಜೀಜ್‌ಸೇಟ್.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈ ಬಗ್ಗೆ ಕ್ಯಾಬಿನೆಟ್ಟಿನಲ್ಲಿ ತೀವ್ರವಾಗಿ ಯೋಚನೆಮಾಡಿ ಚರ್ಚೆಮಾಡಿ ನಿವೃತ್ತಿ ವಯೋಮಿತಿಯಿಂದ್ನು ೫೫ಕ್ಕೆ ಇಳಿಸಬೇಕೆಂದು ತೀರ್ಮಾನಮಾಡಲಾಗಿದೆ. ಈ ಕಾರಣದಿಂದ ಸರ್ಕಾರದಲ್ಲಿರತಕ್ಕ ೨ ಲಕ್ಷ ೫೦ ಸಾವಿರ ನೌಕರರಲ್ಲಿ ಶೇಕಡ ೩೯ರಷ್ಟು ಹೈಯರ್

ಏಜ್‌ನವರಂ ಬೆನಿಫಿಟ್ಸ್, ತೆಗೆದುಕೊಳ್ಳುತ್ತಿದ್ದಾರೆ. ಈಗ ವಯೋಮಿತಿಯನ್ನು ೫೫ಕ್ಕೆ ಮಾಡಂವುದರಿಂದ ಶೇಕಡ ೩೦ರಷ್ಟು ನೌಕರರು ಕೂಡಲೆ ರಿಟೈರ್ ಅವಶ್ಯಕತೆ ಬರುತ್ತದೆ. ಆದ್ದರಿಂದ ಕೆಲವಾರಂ ಹೊಸ ಯೋಜನೆಗಳಿಂದ ನಿರುದ್ಯೋಗಿಗಳಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತದೆ.

ಶ್ರೀ ಎಚ್.ಎಸ್. ಸಿದ್ದಪ್ಪ.—ರೂರಲ್ ಮತ್ತು ಅರ್ಬನಿನಲ್ಲಿ ನಿರುದ್ಯೋಗಿಗಳು ಎಷ್ಟಿದ್ದಾರೆ ಎಂಬುದಾಗಿ ಡಿಫರೆನ್ಷಿಯೇಟ್ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಸರ್ಕಾರದ ನೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಈ ನಿರುದ್ಯೋಗ ಸಮಸ್ಯೆಯನ್ನು ಸಾಲ್ವ್ ಮಾಡಬೇಕೆಂದೂ ಇದೆ. ಕಳೆದಸಾರಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿಯೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜನ್ನು ಮಾಡುತ್ತೇವೆಂದು ಹೇಳಿದ್ದೀರಿ. ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ರೀಜನಲ್ ವೈಸ್ ಅಪಾಯಿಂಟ್‌ಮೆಂಟ್ಸ್ ಕೊಡುತ್ತೇವೆಂದು ಹೇಳಿದ್ದಿರಿ, ಆದ್ದರಿಂದ ಈಗ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವಿದ್ಯಾವಂತ ನಿರುದ್ಯೋಗಿಗಳಿಗೆ ರೀಜನಲ್ ವೈಸ್ ಅಪಾಯಿಂಟ್‌ಮೆಂಟ್ಸ್ ಕೊಡುವುದಕ್ಕೆ ಸಾಧ್ಯವಿಲ್ಲವೆ ? ಈ ರೀತಿಯಾ ಮಾಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವಿದ್ಯಾವಂತ ನಿರುದ್ಯೋಗಿಗಳಿಗೆ ಹೆಚ್ಚಿಗೆ ಅನುಕೂಲವಾಗುತ್ತದೆಂಬುದಾಗಿ ನಿಮಗೆ ನಂಬಿಕೆ ಇಲ್ಲವೆ ?

ಶ್ರೀ ಅಜೀಜ್‌ಸೇಟ್.—ಮಾನ್ಯ ಸದಸ್ಯರು ಹೇಳುತ್ತಿರುವ ಮಾತನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅನೇಕ ವಿದ್ಯಾರ್ಥಿಗಳು ರೂರಲ್ ಏರಿಯಾದಿಂದ ಬಂದು ಅರ್ಬನ್ ಏರಿಯಾದಲ್ಲಿ ವಿದ್ಯಾಭ್ಯಾಸ ಮಾಡಿ ಇಲ್ಲಿರುವ ಹೋಟೆಲು, ಸಿನಿಮಾ, ಮುಂತಾದುವುಗಳನ್ನು ನೋಡಿ ಪುನಃ ಹಳ್ಳಿಗಳಿಗೆ ಹೋಗುವುದಕ್ಕೆ ತಯಾರಾಗಿಲ್ಲ. ಇಲ್ಲಿ ಇದ್ದು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿ ಕೆಲಸಕ್ಕೆ ಸೇರುತ್ತಾರೆ. ಆನೇಕರು ಹೀಗೆ ಕೆಲಸಕ್ಕೆ ಸೇರಿಕೊಂಡು ಇಲ್ಲೇ ರಿಟೈರ್ ಆಗಿ ಹೋಟ್ಸ್ ಆಗುತ್ತಾರೆ. ಇದರಿಂದಾಗಿ ಅರ್ಬನ್ ಏರಿಯಾದ ಪಾಪ್ಯುಲೇಷನ್ ದಿನೇ ದಿನೇ ಜಾಸ್ತಿಯಾಗುತ್ತಾ ಇದೆ,

ಶ್ರೀ ಕಾಗೋಡು ತಿಮ್ಮಪ್ಪ — ತಾವು ಗ್ರಾಮಾಂತರ ಪ್ರದೇಶದ ಜನರಿಗೂ ನಗರ ಪ್ರದೇಶದ ಜನರಿಗೂ ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಕಡಿಮೆ ಅಂಕಗಳನ್ನು ಪಡೆದಿರತಕ್ಕ ವಿಷಯ ತಮಗೆ ಗೊತ್ತಿಲ್ಲವೇ? ಮತ್ತು ಹೀಗೆ ಗ್ರಾಮಾಂತರ ಪ್ರದೇಶದ ಮಕ್ಕಳು ಕಡಿಮೆ ಅಂಕ ಪಡೆದು, ನಗರ ಪ್ರದೇಶದ ಹೆಚ್ಚು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳ ಜೊತೆಗೆ ಕೆಲಸಕ್ಕಾಗಿ ಇಂಟರ್‌ವ್ಯೂಗೆ ಹೋದರೆ ನಗರ ಪ್ರದೇಶದ ವಿದ್ಯಾರ್ಥಿಗಳೇ ನೌಕರಿಗೆ ಸೆಲೆಕ್ಟ್ ಆಗುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ಮತ್ತು ಹಾಗೆ ಬಂದಿದ್ದರೆ ಇದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಅಜೀಜ್‌ಶೇಟ್.—ಅದು ತಮ್ಮ ಅಭಿಪ್ರಾಯ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ನಿರುದ್ಯೋಗ ಸಮಸ್ಯೆ ನಮ್ಮಲ್ಲಿ ಬೆಳೆಯುತ್ತಾ ಇದೆಯೆಂದು ತಾವು ಒಪ್ಪಿದ್ದೀರಿ. ಆದರೆ ವಿದ್ಯಾವಂತರಂ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ನೆಲೆಸುವುದಕ್ಕೆ ನೀವು ಯಾವ್ಯಾವ ಸ್ಕೀಮುಗಳನ್ನು ಹಾಕಿಕೊಂಡಿದ್ದೀರಿ; ಮತ್ತು ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ?

ಶ್ರೀ ಅಜೀಜ್‌ಸೇಟ್.—ಅದಕ್ಕಾಗಿಯೇ ಇಂಡಸ್ಟ್ರಿಯಲ್ ಬ್ಯಾಕವರ್ಡ್ ಏರಿಯಾಗಳನ್ನು ಸರ್ವೆ ಮಾಡಿ, ಅಂಥ ಜಾಗಗಳಲ್ಲಿ ಅಭಿವೃದ್ಧಿ ಮಾಡಬೇಕೆಂದು ಪ್ರೋತ್ಸಾಹ ಕೊಡುತ್ತಿದ್ದೇವೆ. ಅನೇಕ ಕೈಗಾರಿಕೆಗಳನ್ನು ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಮಾಡಬೇಕೆಂದು ಹೇಳುತ್ತಿದ್ದೇವೆ. ಆದರಿಂದ ಈ ಸರ್ಕಾರ ಬಂದ ಮೇಲೆ ಅನೇಕ ಸಕ್ಕರೆ ಕಾರ್ಖಾನೆ, ಪವರ್‌ಲೂಮ್ಸ್ ಇತ್ಯಾದಿಗಳನ್ನು ಹಿಂದುಳಿದ ಪ್ರದೇಗಳಲ್ಲಿ ಮಾಡುತ್ತಿದ್ದೇವೆ.

ಶ್ರೀ ಬಾಪುಗೌಡ ರಾಯಪ್ಪ.—ತಾವು ಹೇಳಿದ ಪ್ರಕಾರ ೩೫ ಸಾವಿರ ಜನರಿಗೆ ಉದ್ಯೋಗ ಕಲ್ಪಿಸುತ್ತೀರೆಂದು ತಿಳಿಯುತ್ತಿದೆ. ತಮ್ಮ ಲೆಕ್ಕದ ಪ್ರಕಾರ ಪ್ರತೀ ಜಿಲ್ಲೆಯ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ಎಷ್ಟು ಇದೆ; ಮತ್ತು ಈ ೩೫ ಸಾವಿರ ಉದ್ಯೋಗ ಈ ವರ್ಷದಲ್ಲಿ ಕೊಡುತ್ತೀರೋ ಅಥವಾ ಪಂಚವಾರ್ಷಿಕ ಯೋಜನೆಯಲ್ಲಿ ಕೊಡುತ್ತೀರೊ.

ಶ್ರೀ ಅಜೀಜ್‌ಸೇಟ್.—ನಮ್ಮ ರಾಜ್ಯದಲ್ಲಿ ಇದಕ್ಕಾಗಿ ಒಂದು ೫ ಕೋಟಿ ರೂಪಾಯಿಗಳ ಪ್ಲಾನ್ ಮಾಡಿ ಕೇಂದ್ರಕ್ಕೆ ಒಪ್ಪಿಸಿದ್ದಾರೆ. Before March 1974 I would like to see that the target is fullfilled. We are going to encourage them to form

(SRI AZIZ SAITH)

co-operative societies. We want to train them and help them to take up ancilliary industries. We will encourage them to be self-employed. We have taken all efforts in this direction. We have appointed a special Director for this purpose, have created a special cell and have appointed a Coordinating Committee.

FOREST DISPENSARY IN KALAVE AREA

55 (74) SMT. RADHA BHATT (Ankola).—

Will the Minister for Health be pleased to state —

(*a*) whether it has come to the notice of the Government that there is a comprehensive Nursery Division of Forest Department in Kalve area in the western division of Sirsi Taluk;

(*b*) whether it is not a fact that the Government have invested huge amount for the same;

(*c*) whether the Government is thinking of starting a forest dispensary as the villages around the area are thickly populated?

SRI H. SIDDAVEERAPPA (Minister for Health).—

(*a*) Yes.

(*b*) Government have invested the amount necessary for the purpose.

(*c*) No.

ಶ್ರೀಮತಿ ರಾಧಾಭಟ್. —ಈ ನರ್ಸರಿಯನ್ನು ಯಾವ ವರ್ಷ ಪ್ರಾರಂಭಿಸಲಾಯಿತು?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ವರ್ಷ ಪ್ರಾರಂಭವಾಯಿತು ಎನ್ನುವುದಕ್ಕೆ ಉತ್ತರವಿಲ್ಲ; ನೋಟೀಸ್ ಬೇಕು.

ಶ್ರೀಮತಿ ರಾಧಾಭಟ್. —ಈ ನರ್ಸರಿಗೆ ಎಷ್ಟು ಹಣ ಖರ್ಚಾಗಿದೆ ಮತ್ತು ಇದರಿಂದ ಯಾವ ಪ್ರಯೋಜನವಾಗಿದೆ ಎಂದು ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಹಣ ವೆಚ್ಚವಾಗಿದೆ ಎಂದು ಹೇಳಲಾರೆ. ಈ ಫಾರೆಸ್ಟ್ ನರ್ಸರಿಯಿಂದ ಮೆಡಿಸಿನ್ನಿಗೆ ಉಪಯೋಗಿಸಿಕೊಳ್ಳಬೇಕೆಂದು ಅದನ್ನು ಮಾಡಿದ್ದಾರೆ. ಅದರಿಂದ ಪ್ರಯೋಜನ ಕಂಡಂ ಇಲ್ಲಿಯವರೆಗೆ ಹೊರ ಬಿದ್ದಿಲ್ಲ.